
ಎಸ್.ಆರ್.ಅನುರಾಧಾ, ಯಲಹಂಕ
*ಯಾರು ಹಿತವರು ನಿಮಗೆ ಈ ಮೂವರೊಳಗೆ ಖಾಕಿಯೋ? ಖಾದಿಯೋ? ಕಾವಿಯೋ?*



ಇದೂ ಒಂದು ಆಯ್ಕೆಯೇ? ರಾಹು, ಕೇತು, ಶನಿಗಳಲ್ಲಿ ಯಾರು ಉತ್ತಮ ಎಂದು ಕೇಳಿದಂತಾಯ್ತು!

ಸುಶೀಲ ಮುರಳೀಧರ್, ಬೆಂಗಳೂರು
*ಬಿಗ್‌ಬಾಸ್ ಪ್ರಶಸ್ತಿಯ ಮೊತ್ತವು ಕಲಾಸಾಗರನಂತಹ ಪ್ರತಿಭೆಗೆ ಕೊಡುವುದಕ್ಕೆ ಕಡಿಮೆ ಎಂದು ಕೊಡಲಿಲ್ಲವಂತೆ. ಹೌದಾ?*
ಶುದ್ಧ ಸುಳ್ಳು. ಸಾಗರನ ಪ್ರತಿಭೆಯ ಆಳ ಅಳೆಯುವ ಯೋಗ್ಯತೆ ಅವರಿಗೆ ಇರಲಿಲ್ಲವಷ್ಟೆ!

ಪಿ.ಜೆ. ರಾಘವೇಂದ್ರ, ಮೈಸೂರು
*ಬೀಚಿ ಉತ್ತರಭೂಪನಾದರೆ... ರಾಮ್...?*
ಉತ್ತರೋತ್ತರ ಭೂಪ? ಹಾಗೇನಿಲ್ಲ. ಅವರ ಬುನಾದಿಗೆ ನನ್ನದೊಂದು ಭವನವಷ್ಟೆ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ
*ಇತ್ತೀಚಿನ ದಿನಗಳಲ್ಲಿ ಎಟಿಎಂಗಳಲ್ಲಿ ಕಳುವಾಗಲು ಕಾರಣವೇನು?*




ಗ್ರಾಹಕರದೇ ತಪ್ಪು. ಎಟಿಎಂಗೆ ಹಾಕಿದ ಎಲ್ಲಾ ಹಣವನ್ನು ಮೊದಲೇ ಡ್ರಾ ಮಾಡಿದ್ದರೆ ಕಳ್ಳತನ ಆಗುತ್ತಲೇ ಇರಲಿಲ್ಲ!

ಡೈರಿ ವಿಶ್ವನಾಥ್, ಬೆಂಗಳೂರು
*ಅಧಿಕಾರ ಒಳ್ಳೆಯದೋ, ಅಹಂಕಾರ ಒಳ್ಳೆಯದೋ?*
ಅಧಿಕಾರದಲ್ಲಿ ಅಹಂಕಾರ, ಅಹಂಕಾರಿಗೆ ಅಧಿಕಾರ ಇರದಿದ್ದರೆ ಒಳ್ಳೆಯದು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಸರ್ದಾರ್ ಪಟೇಲರು ಸಣ್ಣ ರಾಜ್ಯಗಳನ್ನು ಒಗ್ಗೂಡಿಸಿ ಅಖಂಡ ಭಾರತ ಮಾಡಿದರು. ಆದರೆ ಈಗ...?*
ಕಾಫಿ, ಟೀಗೆ ಮಾತ್ರ ಸೀಮಿತವಾಗಿದ್ದ ಬೈಟೂ ಸರ್ವೀಸ್ ರಾಜ್ಯಗಳಿಗೂ ಬಡಿದು ಅಖಂಡ ಈಗ ಖಂಡತುಂಡ!

ಶ್ರೀಯಾ ಪ್ರಮೋದ ಬಸ್ತಿ, ಹುಬ್ಬಳ್ಳಿ
*ರಾಮ್, ಕುಶಲವೇ? ಎಂದೇಕೆ ಯಾರೂ ಪ್ರಶ್ನಿಸುವುದಿಲ್ಲ?*
ಅಯ್ಯೋ, ನನ್ನ ಕಥೆ ಕೇಳಿ... ಎನ್ನುತ್ತಾ ಒಂದು ರಾಮಾಯಣವನ್ನೇ ಶುರು ಮಾಡಿಬಿಡುತ್ತೇನೆಂಬ ಭಯ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಎಲ್ಲಕ್ಕಿಂತ ದೊಡ್ಡದು ಆಕಾಶ. ಆಕಾಶಕ್ಕಿಂತ ದೊಡ್ಡದು ಆಸೆ. ಆಸೆಗಿಂತ ದೊಡ್ಡದು?*
ತೃಪ್ತಿ.

ಎಚ್.ಜಿ. ಜಗದೀಶ್, ಮೈಸೂರು
*ಒಂದೇ ಪತ್ರದಲ್ಲಿ ಎಷ್ಟು ಪ್ರಶ್ನೆಗಳನ್ನು ಕೇಳಬಹುದು ರಾಮ್‌ಜೀ?*
ಎಷ್ಟು ಬೇಕಾದರೂ ಕೇಳಿ. ಉತ್ತರಿಸುವುದು ಮಾತ್ರ ಒಂದಕ್ಕೇ!

ದೀಪಾ ವಿ. ಮಹಾಲೆ, ಸಾಂಬ್ರಾಣಿ
*ಟೆಲಿಗ್ರಾಂ ಅಂತ್ಯಕಾಲದಲ್ಲಿ ಅಂಚೆಪತ್ರಕ್ಕೆ ಹೇಳಿದ ಕಿವಿಮಾತೇನು?*
ನೀನು ಭೀಷ್ಮ, ನಾನು ಅಭಿಮನ್ಯು. ನನ್ನ ಕಾಲ ಮುಗಿಯಿತು. ನೀನು ಇರುವವರೆಗೆ ಚೆನ್ನಾಗಿರು .

ಕುಮಾರ ಚಲವಾದಿ, ಹೊಳೆನರಸಿಪುರ
*ವಾಲಿಯನ್ನು ಮರೆಯಲ್ಲಿ ನಿಂತು ಸಂಹರಿಸಿದ ಶ್ರೀರಾಮ ಲೋಕಮಾನ್ಯನಾದದ್ದು ಹೇಗೆ?*
ವಾಲಿ ಕಪಿ, ರಾಮ ಕ್ಷತ್ರಿಯ. ಕ್ಷತ್ರಿಯರಾಜರು ಕಾಡುಮೃಗಗಳನ್ನು ಬೇಟೆಯಾಡುವುದು ಅಂದಿಗೆ ಸಮ್ಮತವಾದ ಪದ್ಧತಿ.

ಮಂಜುಳ ಪ್ರಸನ್ನ, ಮೈಸೂರು
*ಕೆಲವರು ಮಕ್ಕಳೇ ನಮಗೆ ಆಸ್ತಿ ಎನ್ನುವುದರ ಕಾರಣ?*
ತಿಳಿಯಿತು. ಗಂಡುಮಕ್ಕಳು; ಮುಂದೊಮ್ಮೆ ಡೌರಿ ಮಾರ್ಕೆಟ್‌ನಲ್ಲಿ ಒಳ್ಳೆಯ ಬೆಲೆ ಬರುವ ನಿರೀಕ್ಷೆ!

ಬಿ. ಚಂದ್ರೇಗೌಡ, ಬೆಂಗಳೂರು
*ಮಕ್ಕಳ ಜೊತೆ ಮಗುವಾಗೋದು ಎಂದರೇನು?*
ಚೈಲ್ಡ್ ಸೈಕಾಲಜಿಸ್ಟ್ ಆಗುವುದೆಂದು!


## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ ಎನ್ನುತ್ತಾನೆ ಗಂಡ. ಗಂಡ ಮನೆಯೊಳಗಿದ್ದರೆ ಹೆಂಡತಿ ಏನೆಂದಾಳು...?*
ಆಡಿಸಿದಾತ ಬೇಸರ ಮೂಡಿ ಆಟ ಮುಗಿಸಿದಾ.. ಮನೆಯಲೆ ಕುಳಿತ ಗಳಿಕೆಯನೆಲ್ಲಾ ಮಣ್ಣಾಗಿಸಿದಾ... ನಂಬಿದ ಹೆಂಡತಿ ಮಕ್ಕಳ ಕೈಗೆ ಚಿಪ್ಪು ತುರುಕಿದಾ.. ಅಯ್ಯೋ ಚಿಪ್ಪು ತುರುಕಿದಾ...

ಜಾಕೋಬ್ ಡಿಸೋಜ, ಕುರುವಳ್ಳಿ
*ಸಂತರು ಎಂದರೆ ಯಾರು?*
ವಸಂತವನ್ನು ನೋಡಿಯೂ ವಾಹ್ ಎನ್ನುತ್ತಾ ಮೋಹಿಸದವರು!

ರುದ್ರಮೂರ್ತಿ ಎಂ.ಜೆ, ಚಿತ್ರದುರ್ಗ
*ಹನ್ನೆರಡು ರೂಪಾಯಿ ನೀಡಿ ಆದರದಿಂದ ಸ್ವಾಗತಿಸುತ್ತಿದ್ದೆವು; ಈಗ ಹದಿನೈದಾಗಿ ಸುಧಾ ತುಸು ತುಟ್ಟಿಯಾದಳೆನಿಸುತ್ತದೆ...?*
ತಿಂಗಳಿಗೆ ಹನ್ನೆರಡು ರೂಪಾಯಿ ಹೆಚ್ಚಳ! ತಿಂಗಳಿಗೊಂದು ಕಪ್ ಕಾಫಿ ಕಡಿಮೆ ಕುಡಿಯಿರಿ, ಪ್ಲೀಸ್!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಹುತ್ತ ಕಟ್ಟುವ ಗೆದ್ದಲು ಹುಳುವಿಗೂ, ಹಣ ಕೂಡಿಡುವ ಜಿಪುಣನಿಗೂ ಏನು ವ್ಯತ್ಯಾಸ?*



ಗೆದ್ದಲು ಹುಳಗಳು ಸಾಯುವವರೆಗೂ ಲವಲವಿಕೆಯಿಂದ ಇರುತ್ತವೆ.

ಪ್ರವೀಣ ಅಮರೇಶ ಹಡಗಲಿ, ಬೇವೂರ
*ನೀವು ಕೇಳಿದಿರಿ ವಿಭಾಗದ ರಾಮ್ ಗೂ, ಅಬಕಾರಿ ಇಲಾಖೆಯ ರಮ್ ಗೂ ಇರುವ ವ್ಯತ್ಯಾಸವೇನು?*
ಕಿಕ್ ಒಂದೇ ಆದರೂ ವಾಸನೆ ಬೇರೆಬೇರೆ!

ಓಂಚನ್ನೇಶ್, ಅರಬಿಳಚಿ ಕ್ಯಾಂಪ್
*ತುಂಡು ಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ ಅಂತಾಳಲ್ಲಾ ವೀಣಾ ಮಲ್ಲಿಕ್?*
ಸದ್ಯ! ಅಷ್ಟಾದರೂ ಅರಿವೆ ಬೇಕೆಂಬ ಅರಿವು ಇದೆಯಲ್ಲ!

■ ರಾಮ್